ದಿನಾಂಕಃ **01-10-2024** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಬಿ ಜಿ ಸಿ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಅಂಶಗಳನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಹೇಳಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಾವೆಗೆ ಸಂಬಂಧಿಸಿದಂತೆ ಈ ಕೆಳಗಿನ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದು ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಳ್ಳಲು ಕೋರುತ್ತೇನೆ.

1. ದಿಃ 21.05.2010 ರ ನೋಂದಾಯಿತ ಕ್ರಯವನ್ನು ನಿಪಿ1 ಎಂದು ಗುರುತಿಸಲಾಯಿತು.
2. ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವ ಎಂ ಆರ್ ಸಂಖ್ಯೆ 16/2010-11 ರ ದೃಢೀಕೃತ ನಕಲನ್ನು ನಿಪಿ-2 ಎಂದು ಗುರುತಿಸಲಾಯಿತು.
3. ದಾವಾ ಆಸ್ತಿಗೆ ಸಂಬಂದಪಟ್ಟಿರುವ ಸೈಟ್ ನಂಬರ್ 345/5 ರ ಇ ಖಾತಾವನ್ನು ನಿಪಿ-3 ಎಂದು ಗುರುತಿಸಲಾಯಿತು.
4. ದಾವಾ ಆಸ್ತಿಗೆ ಸಂಬಂದಪಟ್ಟಿರುವ 2010-11 ನೇ ಸಾಲಿನ ಡಿಮ್ಯಾಂಡ್ ರೆಜಿಸ್ಟರನ್ನು ನಿಪಿ-4 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ದಾವೆಯನ್ನು ನನ್ನ ಪರವಾಗಿ ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು
ತಿಪಟೂರು.